# ಫ್ಲಿಪ್ ಕಾರ್ಟ್ ಫೌಂಡೇಶನ್ ಮತ್ತು ಸ್ಮೈಲ್ ಫೌಂಡೇಶನ್ ಸಹಭಾಗಿತ್ವದಲ್ಲಿ ಹಿಂದುಳಿದ ಯುವ ಸಮುದಾಯಕ್ಕೆ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮ

- **ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ, ಸಶಕ್ತೀಕರಣ ಮತ್ತು ಉದ್ಯೋಗ ಸೃಷ್ಟಿ ವಿಷನ್ ಗೆ ಪೂರಕವಾದ ಕಾರ್ಯಕ್ರಮವಿದು**
- **ಬೆಂಗಳೂರಿನ ತರಬೇತಿ ಹೊಂದಿದ ಯುವ ಸಮುದಾಯಕ್ಕೆ ಆರಂಭಿಕ ಹಂತದ ಉದ್ಯೋಗ ಪಡೆಯುವಂತೆ ಮಾಡುವುದು ಈ ಸಹಭಾಗಿತ್ವದ ಪ್ರಮುಖ ಗುರಿ**

ಬೆಂಗಳೂರು, 19, 2023: ಫ್ಲಿಪ್ ಕಾರ್ಟ್ ಗ್ರೂಪ್ ನ ಚಾರಿಟೇಬಲ್ ಸಂಸ್ಥೆಯಾಗಿರುವ ಫ್ಲಿಪ್ ಕಾರ್ಟ್ ಫೌಂಡೇಶನ್ ಭಾರತೀಯ ಅಭಿವೃದ್ಧಿ ಸಂಸ್ಥೆಯಾಗಿರುವ ಸ್ಮೈಲ್ ಫೌಂಡೇಶನ್ ಸಹಭಾಗಿತ್ವದಲ್ಲಿ ದುರ್ಬಲ ಮತ್ತು ಹಿಂದುಳಿದ ವರ್ಗದ ಸಮುದಾಯದ ಯುವ ಪೀಳಿಗೆಯನ್ನು ಸಶಕ್ತರನ್ನಾಗಿ ಮಾಡುವ ಕೌಶಲ್ಯ-ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿದೆ. ಈ ಸಹಭಾಗಿತ್ವದಲ್ಲಿ ಯುವ ಸಮೂಹಕ್ಕೆ ಕೈಗಾರಿಕೆ ಸಂಬಂಧಿತ ಕೌಶಲ್ಯಗಳ ತರಬೇತಿ, ಬ್ಯಾಂಕಿಂಗ್ ನಲ್ಲಿ ಪರಿಣತಿ, ಹಣಕಾಸು ಸೇವೆಗಳು ಮತ್ತು ವಿಮೆ(BFSI), ವ್ಯಕ್ತಿತ್ವ ಅಭಿವೃದ್ಧಿ ಮತ್ತು ಸಾಫ್ಟ್ ಸ್ಕಿಲ್ಸ್ ಬಗ್ಗೆ ತರಬೇತಿ ನೀಡಲು ವಿಶೇಷ ಆದ್ಯತೆ ನೀಡಲಾಗುತ್ತದೆ.

ಈ ಪರಿಣಾಮಕಾರಿ ಸಹಭಾಗಿತ್ವದ ಪ್ರಮುಖ ಭಾಗವಾಗಿ ಬೆಂಗಳೂರಿನಲ್ಲಿರುವ ಸ್ಮೈಲ್ ಟ್ವಿನ್ ಇ-ಲರ್ನಿಂಗ್ ಪ್ರೋಗ್ರಾಂ (STeP) ನ ಎರಡು ಕೇಂದ್ರಗಳಿಗೆ ಈ ಕಾರ್ಯಕ್ರಮವನ್ನು ವಿಸ್ತರಿಸಲಾಗುತ್ತದೆ. ಈ ಸಂಸ್ಥೆಗಳು ಹಿಂದುಳಿದ ವರ್ಗಗಳ 270 ಯುವಕ/ಯುವತಿಯರಿಗೆ ಸಮಗ್ರ ತರಬೇತಿಯನ್ನು ನೀಡಲಿವೆ. ಹೀಗೆ ತರಬೇತಿ ಹೊಂದುವ ಮೂಲಕ ಯುವ ಸಮುದಾಯವು ಪರೋಕ್ಷವಾಗಿ ಸುಮಾರು 1,100 ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಡಲಿದೆ. ತರಬೇತಿ ಹೊಂದಿದವರಿಗೆ ಆರಂಭಿಕ ಹಂತದ ಉದ್ಯೋಗಗಳು ದೊರೆಯುವಂತೆ ಮಾಡುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ. ಇದರಿಂದ ಯುವ ಸಮುದಾಯದ ಭರವಸೆಯ ಭವಿಷ್ಯದ ಬಾಗಿಲು ತೆರೆಯಲು ಸಾಧ್ಯವಾಗುತ್ತದೆ.

ಈ ಯೋಜನೆಯು 12 ತಿಂಗಳ ಅವಧಿಯದ್ದಾಗಿದ್ದು, ಸರ್ಕಾರದ ಕಾರ್ಯಕ್ರಮವಾದ ಸ್ಕಿಲ್ ಇಂಡಿಯಾ ಮಿಶನ್ ಜೊತೆಗೆ ಸಹಭಾಗಿತ್ವವನ್ನು ಮಾಡಿಕೊಂಡಿದೆ. ಈ 12 ತಿಂಗಳ ಅವಧಿಯಲ್ಲಿ ಪ್ರತಿ ನಾಲ್ಕು ತಿಂಗಳಿಗೊಂದರಂತೆ ಮೂರು ಅವಧಿಯಲ್ಲಿ ತರಬೇತಿಯನ್ನು ನೀಡಲಾಗುತ್ತದೆ. ಈ ಶೈಕ್ಷಣಿಕ

ಪ್ರಯಾಣದ ಆರಂಭದಲ್ಲಿ ಪ್ರತಿ ಅವಧಿಗೆ 45 ವಿದ್ಯಾರ್ಥಿಗಳನ್ನು ನೋಂದಣಿ ಮಾಡಿಕೊಳ್ಳಲಾಗುತ್ತದೆ. ಅನುಭವಿ ತರಬೇತುದಾರರಿಂದ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಇಲ್ಲಿ ವಿದ್ಯಾರ್ಥಿಗಳು ಕೇವಲ ವಿಷಯಗಳನ್ನು ಮಾತ್ರ ಕಲಿಯುವುದಿಲ್ಲ. ಇದರ ಜೊತೆಗೆ ಶೈಕ್ಷಣಿಕ ಪೋರ್ಟಲ್ ನ ವೈಶಿಷ್ಟ್ಯತೆಗಳು ಮತ್ತು ಸಂಪನ್ಮೂಲಗಳ ಬಗ್ಗೆಯೂ ತಿಳಿದುಕೊಳ್ಳಲಿದ್ದಾರೆ. ಈ ಕಾರ್ಯಕ್ರಮವು ಬೋಧಕರಿಗೆ ವೈಯಕ್ತಿಕ ಪ್ರಗತಿ ಮತ್ತು ಒಟ್ಟಾರೆ ಕಾರ್ಯಕ್ಷಮತೆಯನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುವ ಸಾಧನಗಳನ್ನು ಪೂರೈಸುತ್ತದೆ. ಇದರಿಂದಾಗಿ ಅವರು ಸಕಾಲಿಕ ಬೆಂಬಲ ಮತ್ತು ರಚನಾತ್ಮಕವಾದ ಪ್ರತಿಕ್ರಿಯೆಯನ್ನು ನೀಡಲು ಅವಕಾಶ ದೊರೆಯುತ್ತದೆ.

ಈ ಕಾರ್ಯಕ್ರಮದಲ್ಲಿ ಕೌನ್ಸಿಲಿಂಗ್ ಸೆಶನ್ ಗಳೂ ಸಹ ಇರಲಿದ್ದು, ನೋಂದಣಿ ಮಾಡಿಕೊಳ್ಳುವ ಯುವ ಸಮುದಾಯವು ಪರಿಣತರ ಮಾರ್ಗದರ್ಶನಗಳನ್ನು ಪಡೆದುಕೊಳ್ಳಬಹುದು ಮತ್ತು ತಮ್ಮ ಕೌಶಲ್ಯಗಳನ್ನು ಇನ್ನಷ್ಟು ಉನ್ನತೀಕರಿಸಿಕೊಳ್ಳಲು ಪೂರಕವಾದ ಕಾರ್ಯಾಗಾರಗಳಲ್ಲಿ ಪಾಲ್ಗೊಳ್ಳಬಹುದಾಗಿದೆ.

ಈ ಸಹಭಾಗಿತ್ವದ ಬಗ್ಗೆ ಮಾತನಾಡಿದ ಫ್ಲಿಪ್ ಕಾರ್ಟ್ ಫೌಂಡೇಶನ್ ನ ನಿರ್ದೇಶಕರಾದ ಪೂಜಾ ತ್ರಿಶಾಲ್ ಅವರು, ``ಸ್ಮೈಲ್ ಫೌಂಡೇಶನ್ ಜೊತೆಗಿನ ಸಹಭಾಗಿತ್ವದೊಂದಿಗೆ ಫ್ಲಿಪ್ ಕಾರ್ಟ್ ಫೌಂಡೇಶನ್ ನಲ್ಲಿ ನಾವು ಹಿಂದುಳಿದ ಯುವಕರ ಕನಸುಗಳನ್ನು ಸಾಕಾರಗೊಳಿಸುವ ಹಂಚಿಕೆಯ ದೃಷ್ಟಿಕೋನದೊಂದಿಗೆ ನಡೆಯುತ್ತಿದ್ದೇವೆ. ಅವರ ಉಜ್ವಲ ಭವಿಷ್ಯವನ್ನು ಅನ್ಲಾಕ್ ಮಾಡಲು ಕೌಶಲ್ಯಾಭಿವೃದ್ಧಿಯು ಕೀಲಿಯಾಗಿದೆ ಎಂದು ನಾವು ಭಾವಿಸುತ್ತೇವೆ. ಈ ಪರಿವರ್ತನೆ ತರುವ ಉಪಕ್ರಮದ ಮೂಲಕ ನಾವು ಕೇವಲ ಉದ್ಯೋಗ-ಸಿದ್ಧ ವ್ಯಕ್ತಿಗಳನ್ನು ರೂಪಿಸುತ್ತಿಲ್ಲ. ಇದರ ಜೊತೆಗೆ ಅವರಲ್ಲಿ ಆತ್ಮವಿಶ್ವಾಸ ತುಂಬಿ, ಕೌಶಲ್ಯ ಮತ್ತು ಸಶಕ್ತ ಯುವ ಮನಸ್ಸುಗಳನ್ನು ಒಳಗೊಂಡ ಸಮುದಾಯವನ್ನು ರೂಪಿಸುತ್ತಿದ್ದೇವೆ. ಈ ಮೂಲಕ ಒಟ್ಟಾರೆ, ನಾವು ಯಶಸ್ಸಿನ ಕಥೆಗಳನ್ನು ಬರೆಯುತ್ತಿದ್ದೇವೆ ಮತ್ತು ಯುವ ಸಮುದಾಯದ ಭರವಸೆಯ ನಾಳಿನ ಹಾದಿಯನ್ನು ಬೆಳಗಿಸುವತ್ತ ಹೆಜ್ಜೆ ಇಟ್ಟಿದ್ದೇವೆ" ಎಂದರು.

ಸ್ಮೈಲ್ ಫೌಂಡೇಶನ್ ನ ಸಹ-ಸಂಸ್ಥಾಪಕರು ಮತ್ತು ಕಾರ್ಯಕಾರಿ ಟ್ರಸ್ಟಿ ಶಾಂತನು ಮಿಶ್ರಾ ಅವರು ಮಾತನಾಡಿ, ``ಫ್ಲಿಪ್ ಕಾರ್ಟ್ ಫೌಂಡೇಶನ್ ನೊಂದಿಗೆ ಪಾಲುದಾರಿಕೆ ಹೊಂದುತ್ತಿರುವುದು ಮತ್ತು ಮಾರುಕಟ್ಟೆ ಆಧಾರಿತ ಉದ್ಯೋಗ ಕೌಶಲ್ಯಗಳೊಂದಿಗೆ ಅರ್ಹ ಯುವಕರನ್ನು ಸಕ್ರಿಯಗೊಳಿಸುವಲ್ಲಿ

ನಮ್ಮ ಧ್ಯೇಯವನ್ನು ಮುಂದಕ್ಕೆ ಕೊಂಡೊಯ್ಯಲು ನಮಗೆ ಸಂತಸವಾಗುತ್ತಿದೆ. ಈ ಮೂಲಕ ನಮ್ಮ ಸಾಮೂಹಿಕ ಪ್ರಯತ್ನವು ಪ್ರತಿಭೆಗಳ ಬೆಳವಣಿಗೆಯನ್ನು ಉತ್ತೇಜಿಸುವುದರೊಂದಿಗೆ ಸ್ಕಿಲ್ ಇಂಡಿಯಾ ಮಿಷನ್ ಗೆ ಸ್ವಲ್ಪ ಕೊಡುಗೆ ನೀಡಲಿದೆ ಎಂಬ ವಿಶ್ವಾಸ ನಮ್ಮದಾಗಿದೆ. ಇಲ್ಲಿ ತರಬೇತಿ ಪಡೆಯುವ ಮೂಲಕ ನಮ್ಮ ಯುವ ಫಲಾನುಭವಿಗಳು ತಮ್ಮ ಉಜ್ವಲ ಮತ್ತು ಘನತೆಯ ಭವಿಷ್ಯವನ್ನು ರೂಪಿಸಿಕೊಳ್ಳಬಹುದಾಗಿದೆ. ಇದರ ಜೊತೆಯಲ್ಲಿ ಅವರು ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ತಮ್ಮದೇ ಆದ ಅರ್ಥಪೂರ್ಣವಾದ ಕೊಡುಗೆ ನೀಡುತ್ತಾರೆ ಎಂಬ ಭರವಸೆ ನಮ್ಮದಾಗಿದೆ" ಎಂದು ತಿಳಿಸಿದರು.

ಈ ಕಾರ್ಯಕ್ರಮವು ಯುವ ಸಮುದಾಯಕ್ಕೆ ಉದ್ಯೋಗ ನಿಯೋಜನೆಯ ಭರವಸೆ ನೀಡುವುದರ ಜೊತೆಗೆ ಸಮಗ್ರ ಬೆಂಬಲವನ್ನು ನೀಡುತ್ತದೆ. ಈ ಮೂಲಕ ಯುವ ಸಮುದಾಯವನ್ನು ಸಶಕ್ತಗೊಳಿಸಲು ಮತ್ತು ಅವರ ಭವಿಷ್ಯವನ್ನು ಉಜ್ವಲವಾಗುವಂತೆ ಮಾಡುವ ಬದ್ಧತೆಯನ್ನು ನೀಡುತ್ತದೆ ಹಾಗೂ ಭಾರತದ ಅಭಿವೃದ್ಧಿಗೆ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ.

ಈ ಹಿಂದಿನ ವರ್ಷಗಳಲ್ಲಿ ಫ್ಲಿಪ್ ಕಾರ್ಟ್ ಫೌಂಡೇಶನ್ ಆಂಧ್ರಪ್ರದೇಶ, ಅಸ್ಸಾಂ, ಹರಿಯಾಣ, ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ, ಉತ್ತರಪ್ರದೇಶ ಮತ್ತು ಪಶ್ಚಿಮಬಂಗಾಳದ ವಿವಿಧ ಕ್ಷೇತ್ರಗಳಲ್ಲಿ ಕೌಶಲ್ಯರಹಿತ ಮತ್ತು ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಪೂರಕವಾಗಿ ಬೆಂಬಲ ನೀಡಿದ್ದರ ಜೊತೆಗೆ ಅವರನ್ನು ಸಬಲೀಕರಣಗೊಳಿಸುವ ಕೆಲಸವನ್ನು ಮಾಡಿದೆ. ಈ ಮೂಲಕ ಫೌಂಡೇಶನ್ ಗರಿಷ್ಠ ಮಟ್ಟದ ಜನರನ್ನು ತಲುಪಿ, ಅವರ ಜೀವನದಲ್ಲಿ ಸಮರ್ಥನೀಯವಾದ ಪರಿಣಾಮ ಬೀರುವಂತೆ ಮಾಡಿದೆ.

**About the Flipkart Group**

The Flipkart Group is one of India’s leading digital commerce entities and includes group companies Flipkart, Myntra, Flipkart Wholesale, Flipkart Health+, and Cleartrip.

Started in 2007, Flipkart has enabled millions of sellers, merchants, and small businesses to participate in India's digital commerce revolution. With a registered customer base of more than 500 million, Flipkart's marketplace offers over 150 million products across 80+ categories. Today, there are over 14 lakh sellers on the platform, including Shopsy sellers. With a focus on empowering and delighting every Indian by delivering value through technology and innovation, Flipkart has created lakhs of jobs in the ecosystem while empowering generations of entrepreneurs and MSMEs. Flipkart is known for pioneering services such as Cash on Delivery, No Cost EMI and easy returns, which are customer-centric innovations that have made online shopping more accessible and affordable for millions of Indians.

For more information, please write to media@flipkart.com

**About Smile Foundation:**

Smile Foundation is an Indian development organization directly benefiting over 1.5 million underprivileged children and their families every year through more than 400 welfare projects in education, healthcare, livelihood and women empowerment spread across 2,000 remote villages and urban slums in 27 states of India. Smile Foundation has so far trained 75,000 youth through its STeP centers across 16 states of India, with 47,000 them successfully placed in over 200 reputed brands. Girls form 71 per cent of the beneficiaries.